ಮಂಗಳೂರು ಕೆಮಿಕಲ್ಸ್ ಮತ್ತು ಪರ್ಟಿಲೈಸರ್ಸ ಕಂಪನಿಯಲ್ಲಿ ಸರ್ಕಾರಿ ಷೇರು ಹಣ

3061 (3609) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಕಂಪನಿಯಲ್ಲಿ ರಾಜ್ಯದ ಎಷ್ಟು ಸಹಕಾರಿ ಸಂಘಗಳು ಎಷ್ಟು ಹಣವನ್ನು ಷೇರು ಹಣವನ್ನಾಗಿ ತೊಡಗಿಸಿವೆ;

ಆ) ಈ ಕಂಪನಿಯಲ್ಲಿ 1998–99, 1999–2000ರಲ್ಲಿ ಮಾರಾಟ ಮಾಡಿದ ವಿವಿಧ ಗೊಬ್ಬರದ ಮೊತ್ತ ಎಷ್ಟು;

ಇ) ಈ ಕಾರ್ಖಾನೆ 31.03.2000ಕ್ಕೆ ಗಳಿಸಿದ ಮೊತ್ತ ಎಷ್ಟು;

ಈ) ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಈ ಕಾರ್ಖಾನೆಗೆ 30.9.2000ರವರೆಗೆ ನೀಡಿದ ವಿವಿಧ ಹಣಕಾಸು ನೆರವು ಮತ್ತು ಸಾಲ ಎಷ್ಟು;

ಉ) ಈ ಕಂಪನಿಯ ಅಧಿಕಾರಿ 1999–2000ರಲ್ಲಿ ಪಡೆದ ಒಟ್ಟು ಸಂಭಾವನೆ ಎಷ್ಟು?

ಶ್ರೀ ಆರ್.ವಿ. ದೇಶ್‌ಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು):

ಅ) ಸದರಿ ಕಂಪನಿಯಲ್ಲಿ ಕರ್ನಾಟಕ ರಾಜ್ಯದ 225 ಸಹಕಾರಿ ಸಂಘಗಳು ರೂ. 10–00 ಮೌಲ್ಯದ 2,47,735 ಈಕ್ವಿಟಿ ಷೇರುಗಳನ್ನು ಹೊಂದಿರುತ್ತವೆ.

ಆ) ಆ ಕುರಿತ ವಿವರ ಕೆಳಕಂಡಂತಿದೆ:

	1998–99		1999–2000	
	ಪ್ರಮಾಣ (ಎಂ.ಟಿ.ಎಸ್)	ಮೌಲ್ಯ (ರೂ.ಲಕ್ಷಗಳಲ್ಲಿ)	ಪ್ರಮಾಣ (ಎಂ.ಟಿ.ಎಸ್)	ಮೌಲ್ಯ (ರೂ.ಲಕ್ಷಗಳಲ್ಲಿ)
ಯೂರಿಯಾ	3,46,185	28,906.01	3,33,289	33,859.19
ಡಿ.ಎ.ಪಿ	1,81,667	22,520.26	2,08,769	25,391.60
ಇತರೆ	8,393	518.05	35,806	2,064.44
ಒಟ್ಟು	**5,36,245**	**51,944.32**	**5,77,864**	**61,315.23**

ಇ) ರೂ. 34.84 ಕೋಟಿಗಳು

ಈ) ಕರ್ನಾಟಕ ಸರ್ಕಾರ ನೀಡಿರುವ ಆರ್ಥಿಕ ಸಹಾಯ:

ಸಾಲ	:	ರೂ. 14.59 ಕೋಟಿಗಳು
ಮಾರಾಟ ತೆರಿಗೆ	:	ರೂ. 13.73 ಕೋಟಿಗಳು
ಮುಂದೂಡುವಿಕೆ	:	
ಒಟ್ಟು	:	**ರೂ. 28.32 ಕೋಟಿಗಳು**

ಕೇಂದ್ರ ಸರ್ಕಾರದಿಂದ ಕಂಪನಿಯು ಯಾವುದೇ ಆರ್ಥಿಕ ಸಹಾಯ ಪಡೆದಿರುವುದಿಲ್ಲ.

ಈ) ಈ ಕಂಪನಿಯು 1999–2000ರಲ್ಲಿ 328 ಅಧಿಕಾರಿಗಳಿಗೆ ಒಟ್ಟು ರೂ. 538.60 ಲಕ್ಷಗಳ ಮೊತ್ತದ ಸಂಭಾವನೆ ನೀಡಿರುತ್ತದೆ.